"ELECTION URGENT"

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಕಟ್ಟಡದ (ಹಿಂಭಾಗ), 1ನೇ ಮಹಡಿ,
ನಂ. 8, ಕನ್ನಿಂಗ್ ಹ್ಯಾಂ ರಸ್ತೆ. ಬೆಂಗಳೂರು-560052.

## ರಾಜ್ಯ ಚುನಾವಣಾ ಆಯೋಗದ ನಡವಳಿ

ವಿಷಯ : ಗ್ರಾಮ ಪಂಚಾಯತಿ ಸಾರ್ವತ್ರಿಕ ಚುನಾವಣೆ-2020 – ಕಲಬುರಗಿ ಜಿಲ್ಲೆಯ ಕಮಲಾಪೂರ ತಾಲ್ಲೂಕಿನ 2-ಕಿಣ್ಣಿಸಡಕ ಗ್ರಾಮ ಪಂಚಾಯಿತಿಯ 1-ಕಿಣ್ಣಿಸಡಕ ಕ್ಷೇತ್ರದ ಮತಪತ್ರದಲ್ಲಿ ಚಿಹ್ನೆ ಬದಲಾವಣೆ ಆಗಿದ್ದು ಮರು ಮತದಾನ ನಡೆಸುವ ಬಗ್ಗೆ.

ಓದಲಾಗಿದೆ : 1. ಆಯೋಗದ ಆದೇಶ ಸಂಖ್ಯೆ ರಾಚುಆ.134.ಇಜಿಪಿ.2020 ದಿನಾಂಕ: 30.11.2020

2. ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ ರವರ ಪತ್ರದ ಸಂಖ್ಯೆ: ಕಂ/ಚು.ನಾ./ಗ್ರಾಪಂ/30/2020-21, ದಿನಾಂಕ: 22.12.2020

------

**ಪ್ರಸ್ತಾವನೆ:**

ಮೇಲ್ಕಂಡ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಪತ್ರದಲ್ಲಿ ಚುನಾವಣಾಧಿಕಾರಿ, 2-ಕಿಣ್ಣಿಸಡಕ ಗ್ರಾಮ ಪಂಚಾಯಿತಿ ಮತ್ತು ತಹಶೀಲ್ದಾರ್, ಕಮಲಾಪೂರ ತಾಲ್ಲೂಕು ಇವರ ವರದಿಗಳನ್ನು ಆಧರಿಸಿ ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ ಇವರು 2-ಕಿಣ್ಣಿಸಡಕ ಗ್ರಾಮ ಪಂಚಾಯಿತಿಯ 1-ಕಿಣ್ಣಿಸಡಕ ಕ್ಷೇತ್ರದ ಮತಪತ್ರದಲ್ಲಿ ಶ್ರೀ ಜೈರಾಜ ಎ ಹಲಗಿ ಇವರಿಗೆ ಹಂಚಿಕೆ ಮಾಡಿದ "ತುತ್ತೂರಿ" ಚಿಹ್ನೆಯ ಬದಲಿಗೆ "ಕಹಳೆ ಊದುತ್ತಿರುವ ಮನುಷ್ಯ" ಚಿಹ್ನೆಯು ಮುದ್ರಿತವಾಗಿರುವುದಾಗಿ ಇದರಿಂದ, ಈ ಕ್ಷೇತ್ರದ ಮತಗಟ್ಟೆ ಸಂಖ್ಯೆ: 7 ರಲ್ಲಿ ಮತದಾನವು ಸ್ಥಗಿತಗೊಳಿಸಲಾಗಿದೆ ಎಂದು ವರದಿ ನೀಡಿರುತ್ತಾರೆ. ಮತಪತ್ರದಲ್ಲಿ ಲೋಪವಾಗಿರುವುದರ ಕಾರಣ ದಿನಾಂಕ: 24.12.2020 ರಂದು ಮರು ಮತದಾನ ಮಾಡಲು ಅನುಮತಿ ನೀಡುವಂತೆ ಕೋರಿರುತ್ತಾರೆ.

| ಜಿಲ್ಲೆ | ತಾಲ್ಲೂಕು | ಮತದಾನ ಸ್ಥಗಿತಗೊಂಡಿರುವ ಗ್ರಾಮಪಂಚಾಯಿತಿ, ಕ್ಷೇತ್ರ ಮತ್ತು ಮತಗಟ್ಟೆ ಸಂಖ್ಯೆ | ಘಟನೆಯ ವಿವರ |
|---|---|---|---|
| ಕಲಬುರಗಿ | ಕಮಲಾಪೂರ | 2-ಕಿಣ್ಣಿಸಡಕ ಗ್ರಾಮ ಪಂಚಾಯಿತಿ 1-ಕಿಣ್ಣಿಸಡಕ ಕ್ಷೇತ್ರದ ಮತಗಟ್ಟೆ ಸಂಖ್ಯೆ: 7 | ಮತಪತ್ರದಲ್ಲಿ ಚಿಹ್ನೆ ತಪ್ಪಾಗಿ ಮುದ್ರಿತವಾಗಿರುವುದರಿಂದ ಮತದಾನ ಸ್ಥಗಿತವಾಗಿರುತ್ತದೆ. |

ಪುಟ 2ಕ್ಕೆ..

ಮೇಲ್ಕಂಡಂತೆ ಕಲಬುರಗಿ ಜಿಲ್ಲೆಯ ಕಮಲಾಪೂರ ತಾಲ್ಲೂಕಿನ 2–ಕಿಣ್ಣಿಸಡಕ ಗ್ರಾಮ ಪಂಚಾಯಿತಿಯ 1–ಕಿಣ್ಣಿಸಡಕ ಕ್ಷೇತ್ರದ ಮತಪತ್ರದಲ್ಲಿ ಚಿಹ್ನೆ ತಪ್ಪಾಗಿ ಮುದ್ರಿತವಾಗಿರುವುದರಿಂದ ಮತದಾನವು ಸ್ಥಗಿತಗೊಂಡಿರುತ್ತದೆ. ಆದ್ದರಿಂದ, ಮತಗಟ್ಟೆಗಳ ಸಂಖ್ಯೆ: 7 ರಲ್ಲಿ ಮತದಾನ ಸ್ಥಗಿತಗೊಂಡಿರುವ ಹಿನ್ನೆಲೆಯಲ್ಲಿ ಮರು ಮತದಾನದ ಬಗ್ಗೆ ಈ ಕೆಳಕಂಡಂತೆ ಆದೇಶಿಸಿದೆ.

**ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ: ರಾಚುಆ:208:ಇಜಿಪಿ:2020**
**ಬೆಂಗಳೂರು, ದಿನಾಂಕ: 22.12.2020**

ರಾಜ್ಯ ಚುನಾವಣಾ ಆಯೋಗವು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣ 308 ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಚುನಾವಣೆ ನಡೆಸುವ) ನಿಯಮಗಳು, 1993ರ ನಿಯಮಗಳಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕಲಬುರಗಿ ಜಿಲ್ಲೆ, ಕಮಲಾಪೂರ ತಾಲ್ಲೂಕು 2–ಕಿಣ್ಣಿಸಡಕ ಗ್ರಾಮ ಪಂಚಾಯಿತಿಯ 1–ಕಿಣ್ಣಿಸಡಕ ಕ್ಷೇತ್ರದ ಮತಪತ್ರದಲ್ಲಿ ಚಿಹ್ನೆ ಬದಲಾವಣೆಯಾಗಿರುವುದರಿಂದ ಮತದಾನ ಸ್ಥಗಿತಗೊಂಡಿರುವ ಕಾರಣ, ಸದರಿ ಕ್ಷೇತ್ರದ ದಿನಾಂಕ: 22.12.2020ರ ಮತದಾನವನ್ನು ಅಸಿಂಧುವೆಂದು ಘೋಷಿಸಿ, ಆ ಕ್ಷೇತ್ರಕ್ಕೆ ಮರುಮತದಾನವನ್ನು **ದಿನಾಂಕ: 24.12.2020** ರಂದು ನಡೆಸುವಂತೆ ಆದೇಶಿಸಿದೆ.

ಈ ಕ್ಷೇತ್ರದ ಮತಗಟ್ಟೆಗಳಲ್ಲಿ ಮತದಾನ ದಿನದಂದು ಬೆಳಿಗ್ಗೆ 7–00 ರಿಂದ ಸಾಯಂಕಾಲ 5–00 ಗಂಟೆಯವರೆಗೆ ಮತದಾನ ನಡೆಸತಕ್ಕದ್ದು. ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಕ್ಷೇತ್ರದ ಅಭ್ಯರ್ಥಿಗಳಿಗೆ ಹಾಗೂ ಎಲ್ಲಾ ಮತದಾರರಿಗೆ ಮರು ಮತದಾನದ ದಿನಾಂಕ ಮತ್ತು ಸಮಯದ ಬಗ್ಗೆ ವ್ಯಾಪಕ ಪ್ರಚಾರವನ್ನು ಮಾಡತಕ್ಕದ್ದು.

ಮೇಲ್ಕಂಡ ಕ್ಷೇತ್ರಗಳ ಮತಪತ್ರಗಳನ್ನು ಮುದ್ರಿಸುವಾಗ ಮತಪತ್ರಗಳ ಕ್ರಮ ಸಂಖ್ಯೆಗಳನ್ನು ಹಿಂದೆ ನೀಡಲಾದ ಕೊನೆಯ ಸಂಖ್ಯೆಯಿಂದ ಮುಂದುವರೆಸಿ ನೀಡತಕ್ಕದ್ದು. ಮತದಾರರ **ಎಡಗೈ ಕಿರುಬೆರಳಿಗೆ** ಅಳಿಸಲಾಗದ ಶಾಯಿ ಗುರುತನ್ನು ಮಾಡತಕ್ಕದ್ದು.

ಮೇಲ್ಕಂಡ ಗ್ರಾಮ ಪಂಚಾಯಿತಿ ಕ್ಷೇತ್ರದ ಚುನಾವಣಾ ಅಧಿಸೂಚನೆಯನ್ನು ದಿನಾಂಕ: 07.12.2020 ರಂದು ಹೊರಡಿಸಿದ್ದು, ಆ ದಿನದಿಂದ ನಡೆದಿರುವ ಚುನಾವಣಾ ಸಂಬಂಧದ ಎಲ್ಲಾ ಪ್ರಕ್ರಿಯೆಯು ದಿನಾಂಕ: 24.12.2020 ರಂದು ನಡೆಸಲಾಗುವ ಮರು ಮತದಾನಕ್ಕೆ ಪೂರಕವಾಗಿರುತ್ತದೆ.

ಆದೇಶಾನುಸಾರ,

22/12/2020

ಅಧೀನ ಕಾರ್ಯದರ್ಶಿ
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.

ರಾಜ್ಯ ಚುನಾವಣಾ ಆಯೋಗ ಕರ್ನಾಟಕ

**ಇವರಿಗೆ:**

(1) ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
(2) ಸಂಬಂಧಪಟ್ಟ ಚುನಾಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

**ಪ್ರತಿಯನ್ನು ಮಾಹಿತಿಗಾಗಿ:**

ಚುನಾವಣಾ ವೀಕ್ಷಕರು, ಗ್ರಾಮ ಪಂಚಾಯಿತಿ ಚುನಾವಣೆ, ಕಲಬುರಗಿ ಜಿಲ್ಲೆ.